ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 13-02-2017

## ಪತ್ರಿಕಾ ಆಮಂತ್ರಣ

1. National Arstists' Camp

Inauguration:
Dr. Chandrashekhara Kambar,
Jnanapeeth Awardee
Dr. M. V. Rajeev Gowda,
Rajya Sabha Member
Date: 14-2-2017 Tuesday, at 11-30 a.m.
Venue: Chitrakalaparishat, Art Complex,
Kumarakrupa Road, Bengaluru

## ಪತ್ರಿಕಾ ಪ್ರಕಟಣೆ

## ವಾರ್ತಾ ಇಲಾಖೆಯಿಂದ ವೃತ್ತಿ ಮತ್ತು ನಿರೂಪಣಾ ಕೌಶಲ್ಯ ತರಬೇತಿ

**ಬೆಂಗಳೂರು, ಫೆಬ್ರವರಿ 13,** (ಕರ್ನಾಟಕ ವಾರ್ತೆ)

ತರಬೇತಿಯಲ್ಲಿ ಮುಕ್ತವಾಗಿ ತಮ್ಮ ಅನುಮಾನಗಳನ್ನು ಪ್ರಶ್ನೆ ಕೇಳುವ ಮೂಲಕ ಬಗೆಹರಿಸಿಕೊಳ್ಳಬೇಕೆಂದು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ನಿರ್ದೇಶಕರಾದ ಬಿ. ವಸಂತನಾಯ್ಕ ಅವರು ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಇಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪತ್ರಿಕೋದ್ಯಮದ ವಿದ್ಯಾರ್ಥಿಗಳಿಗಾಗಿ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯಲ್ಲಿ ಏರ್ಪಡಿಸಲಾಗಿರುವ ಏಳು ದಿನಗಳ ವೃತ್ತಿ ಕೌಶಲ್ಯ ತರಬೇತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು ವಾರ್ತಾ ಇಲಾಖೆಯು ಶಿಕ್ಷಣ ಮುಗಿಸಿ ಈಗತಾನೇ ವೃತ್ತಿಗೆ ಸೇರಲು ಸಜ್ಜಾಗಿರುವ ಭಾವಿ ಪತ್ರಕರ್ತರಿಗೆ ಅವರ ವೃತ್ತಿ ಜೀವನವನ್ನು ಸುಗಮವಾಗಿ ಪ್ರಾರಂಭಿಸಲು ಅನುಕೂಲವಾಗುವಂತೆ ವೃತ್ತಿ ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ನೀಡುತ್ತಿದೆ. ಇದರ ಸದುಪಯೋಗವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕೆಂದರು.

ಪತ್ರಿಕೋದ್ಯಮ ಅಷ್ಟು ಸುಲಲಿತವಾದುದಲ್ಲ. ಬಳಸುವ ಭಾಷೆಯ ವ್ಯಾಕರಣದ, ಕಾಗುಣಿತ ತಪ್ಪಾಗಬಾರದು. ಸಮಾಜದ ಅಂಕುಡೊಂಕುಗಳನ್ನು ತಿದ್ದಲು ಹೊರಟಿರುವ ನಿಮಗೆ ಇಂತಹ ತರಬೇತಿಗಳಿಂದ ಹೆಚ್ಚು ಅನುಕೂಲವಾಗಲಿದೆ. ಈ ಏಳು ದಿನಗಳಲ್ಲಿ ನಿಮಗೆ ಪತ್ರಿಕೋದ್ಯಮದಲ್ಲಿ ಸಾಧನೆ ಮಾಡಿದವರಿಂದ ಉಪನ್ಯಾಸಗಳನ್ನು ನೀಡಲಾಗುತ್ತದೆ. ಆದ್ದರಿಂದ ಈ ತರಬೇತಿಯ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವಂತೆ ಅವರು ತಿಳಿಸಿದರು.

ವಾರ್ತಾ ಇಲಾಖೆಯ ಉಪ ನಿರ್ದೇಶಕರಾದ ಎ.ಆರ್. ಪ್ರಕಾಶ್ ಅವರು ವಿದ್ಯಾರ್ಥಿಗಳಿಗೆ ತರಬೇತಿಯ ರೂಪುರೇಷೆ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ತರಬೇತಿ ನಿರ್ದೇಶಕರಾದ ಈಶ್ವರ್ ದೈತೋಟ, ತರಬೇತಿ ಸಮನ್ವಯಾಧಿಕಾರಿ ಡಾ: ಜಯಪ್ರಕಾಶ್ ಅವರು ಉಪಸ್ಥಿತರಿದ್ದರು.

## ಲೈಂಗಿಕ ಕಾರ್ಯಕರ್ತರ ಸ್ಥಿತಿಗತಿಗಳ ಅಧ್ಯಯನ ಸಮಿತಿಯಿಂದ ಮುಖ್ಯಮಂತ್ರಿಗೆ ವರದಿ ಸಲ್ಲಿಕೆ

**ಬೆಂಗಳೂರು, ಫೆಬ್ರವರಿ 13, (ಕರ್ನಾಟಕ ವಾರ್ತೆ)**

ಲೈಂಗಿಕ ಕಾರ್ಯಕರ್ತೆಯರ ಸ್ಥಿತಿಗತಿಗಳ ಅಧ್ಯಯನ ಸಮಿತಿಯ ಅಧ್ಯಕ್ಷರೂ ಹಾಗೂ ವಿಧಾನ ಪರಿಷತ್ತಿನ ಸದಸ್ಯರೂ ಆದ ಡಾ: ಜಯಮಾಲ ಅವರು ಸಮಿತಿಯ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಸಿದರು.

ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಇಂದು ವರದಿಯನ್ನು ಸಲ್ಲಿಸಿ ಮಾತನಾಡಿದ ಡಾ: ಜಯಮಾಲ ಅವರು ಸಮಿತಿಯು ರಾಜ್ಯದ 30 ಜಿಲ್ಲೆಗಳ 176 ತಾಲ್ಲೂಕುಗಳಿಗೂ ಭೇಟಿ ನೀಡಿ ಲೈಂಗಿಕ ಕಾರ್ಯಕರ್ತೆಯರನ್ನು ಭೇಟಿ ಮಾಡಿ ಅವರಿಂದ ಮಾಹಿತಿ ಪಡೆದು ಅಧ್ಯಯನ ನಡೆಸಿ

ವಸ್ತುನಿಷ್ಠ ವರದಿಯನ್ನು ಮುಖ್ಯಮಂತ್ರಿ ಅವರಿಗೆ ಸಲ್ಲಿಸಿದೆ. ಸರ್ಕಾರ ಸಮಿತಿ ನೀಡಿರುವ ವರದಿಯ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರಬೇಕೆಂದು ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿ ಅವರಲ್ಲಿ ಮನವಿ ಮಾಡಿದರು.

ವರದಿಯನ್ನು ಸ್ವೀಕರಿಸಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮಿತಿ ಈಗಷ್ಟೇ ವರದಿ ನೀಡಿದೆ. ವರದಿಯನ್ನು ಅಧ್ಯಯನ ಮಾಡಿ ಸರ್ಕಾರ ವರದಿಯನ್ನು ಗಂಭೀರವಾಗಿ ಪರಿಗಣಿಸಲಿದೆ ಎಂದು ತಿಳಿಸಿದರು.

ಮಹಿಳ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರ ಶ್ರೀಮತಿ ಉಮಾಶ್ರೀ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಡಾ: ಎಲ್.ಕೆ. ಅತೀಖ್ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ರಜನೀಶ್‌ಗೋಯಲ್, ಲೈಂಗಿಕ ಅಲ್ಪಸಂಖ್ಯಾತರ ಸಂಘಟನೆಯ ಮುಖ್ಯಸ್ಥೆ ಅಕ್ಕೈಪದ್ಮಶಾಲಿ ಸೇರಿದಂತೆ ಸಮಿತಿಯ ಸದಸ್ಯರು ಇದೇ ಸಂದರ್ಭದಲ್ಲಿ ಹಾಜರಿದ್ದರು.

## ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನ

ಬೆಂಗಳೂರು, ಫೆಬ್ರವರಿ 13, (ಕರ್ನಾಟಕ ವಾರ್ತೆ)

ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರದಲ್ಲಿ ಖಾಲಿ ಇರುವ ವಿವಿಧ ವೃಂದಗಳ 5 ಹುದ್ದೆಗಳಿಗೆ ನಿಯೋಜನೆ ಮೇಲೆ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಅಪರ ಪೊಲೀಸ್ ಅಧೀಕ್ಷಕರು, ಪೊಲೀಸ್ ಅಧೀಕ್ಷಕರು ಮತ್ತು ಮೇಲಿನ ಹಂತದ ಪೊಲೀಸ್ ಅಧಿಕಾರಿಗಳ ವಿರುದ್ಧ ಸಾರ್ವಜನಿಕರು ದೂರು ಸಲ್ಲಿಸಲು ಅನುಕೂಲವಾಗುವಂತೆ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರವನ್ನು ನಿವೃತ್ತ ಉಚ್ಛ ನ್ಯಾಯಾಲಯದ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುತ್ತದೆ.

ಈ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರದಲ್ಲಿ ಅಧ್ಯಕ್ಷರ ಆಪ್ತ ಕಾರ್ಯದರ್ಶಿ, ಶಾಖೆಯ ಸೆಕ್ಷನ್ ಆಫೀಸರ್ ಒಬ್ಬರು, ಸದಸ್ಯರಿಗೆ ಶೀಘ್ರಲಿಪಿಗಾರರು ಒಂದು ಹುದ್ದೆ, ಸಹಾಯಕರು ಒಂದು ಹುದ್ದೆ, ಕೋರ್ಟ್ ಕೆಲಸ ನಿರ್ವಹಿಸಲು ಬೆಂಚ್ ಕ್ಲರ್ಕ್ ಒಂದು ಹುದ್ದೆ ಒಟ್ಟು 05 ಹುದ್ದೆಗಳು ಖಾಲಿ ಇವೆ.

ಖಾಲಿ ಇರುವ ಮೇಲ್ಕಂಡ ವೃಂದದ ಹುದ್ದೆಗಳನ್ನು ಕರ್ನಾಟಕ ಸರ್ಕಾರ ವಿವಿಧ ಇಲಾಖೆಯಲ್ಲಿ ಸೇವೆಯಲ್ಲಿರುವ ಸರ್ಕಾರಿ ನೌಕರರಿಂದ ನಿಯೋಜನೆ ಮೇಲೆ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸಲು ಇಚ್ಛೆಯುಳ್ಳ ಸರ್ಕಾರಿ ನೌಕರರು ದಿನಾಂಕ 28-02-2017 ರ ಒಳಗಾಗಿ ಅಧ್ಯಕ್ಷರು, ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರ, ಕೊಠಡಿ ಸಂಖ್ಯೆ 36, ವಿಕಾಸ ಸೌಧ, ಬೆಂಗಳೂರು -560 001 ಇಲ್ಲಿಗೆ ತಮ್ಮ ಸೇವಾ ವಿವರಗಳೊಂದಿಗೆ ಮನವಿಯನ್ನು ಸಲ್ಲಿಸಲು ಸೂಚಿಸಲಾಗಿದೆ. ದೂರು ಪ್ರಾಧಿಕಾರಗಳ ಬಗೆಗಿನ ಹೆಚ್ಚಿನ ಮಾಹಿತಿಯನ್ನು **http://www.karnataka.gov.in/spca** ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.

## ಫಲಿತಾಂಶ ಪ್ರಕಟ

ಬೆಂಗಳೂರು, ಫೆಬ್ರವರಿ 13, (ಕರ್ನಾಟಕ ವಾರ್ತೆ)

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಡಿಸೆಂಬರ್ -2016 ರ ಮಾಹೆಯಲ್ಲಿ ನಡೆಸಿದ ಪ್ರಥಮ ಮತ್ತು ದ್ವಿತೀಯ ಡಿ.ಇಡಿ ಪೂರಕ ಪರೀಕ್ಷೆಗಳ ಫಲಿತಾಂಶ ಪಟ್ಟಿಯನ್ನು ರಾಜ್ಯದ ಎಲ್ಲಾ ಡಯಟ್‌ಗಳಿಗೆ ಕಳುಹಿಸಲಾಗಿದೆ.

ಸಂಬಂಧಿಸಿದ ಡಿ.ಇಡಿ ಸಂಸ್ಥೆಗಳ ಪ್ರಾಂಶುಪಾಲರುಗಳು ಫಲಿತಾಂಶ ಪಟ್ಟಿಯನ್ನು ಆಯಾ ಡಯಟ್‌ಗಳಿಂದ ಪಡೆದು ದಿನಾಂಕ: 15-02-2017 ರಂದು ಮಧ್ಯಾಹ್ನ 2.00 ಘಂಟೆಗೆ ಫಲಿತಾಂಶವನ್ನು ಆಯಾ ಸಂಸ್ಥೆಗಳಲ್ಲಿ ಪ್ರಕಟಿಸಲು ನಿರ್ದೇಶಕರು(ಇತರೆ ಪರೀಕ್ಷೆಗಳು) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು ಇವರು ತಿಳಿಸಿದ್ದಾರೆ.

ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ
ರಾಷ್ಟ್ರೀಯ ಕಲಾಶಿಬಿರ

**ಬೆಂಗಳೂರು, ಫೆಬ್ರವರಿ 13, (ಕರ್ನಾಟಕ ವಾರ್ತೆ)**

ಕರ್ನಾಟಕ ಚಿತ್ರಕಲಾ ಪರಿಷತ್ತು ಕಳೆದ ಹಲವು ತಿಂಗಳಿಂದ ಸಾಂಪ್ರದಾಯಕ , ಜಾನಪದ, ಹಾಗೂ ಸಮಕಾಲೀನ ಕಲೆ ಕುರಿತಂತೆ ಕಾರ್ಯಾಗಾರ ಮತ್ತು ಪ್ರದರ್ಶನವನ್ನು ಆಯೋಜಿಸುತ್ತಿದೆ. ಇಂತಹ ಕಲಾ ಶಿಬಿರಗಳು ಯಶಸ್ವಿಯಾಗಿ ನಡೆದು ಸ್ಥಳೀಯ ಕಲಾವಿದರಿಗೆ ಮತ್ತು ಕಲಾ ವಿದ್ಯಾರ್ಥಿಗಳಿಗೆ ತುಂಬಾ ಪ್ರಯೋಜನವಾಗಿದೆ.

ಕರ್ನಾಟಕ ಚಿತ್ರಕಲಾ ಪರಿಷತ್ತು ಕಳೆದ ಐವತ್ತು ವರ್ಷಗಳಲ್ಲಿ ರಾಷ್ಟ್ರ-ಅಂತಾರಾಷ್ಟ್ರೀಯ ಕಲಾವಿದರು ಮತ್ತು ಅವರ ಕಲಾಕೃತಿಗಳನ್ನು ರಾಜ್ಯದ ಜನತೆಗೆ ಪರಿಚಯಿಸುತ್ತಾ ಬಂದಿರುತ್ತದೆ. ಆ ಸಂಪ್ರದಾಯದ ಮುಂದುವರಿದ ಭಾಗವಾಗಿ **'ಫೆಬ್ರವರಿ 14ರಿಂದ 19 ರವರೆಗೆ'** ಸಮಕಾಲೀನ ಕಲೆಯ ಕುರಿತಂತೆ ಅಂತರಾಷ್ಟ್ರೀಯ ಖ್ಯಾತಿ ಕಲಾವಿದರಿಂದ 'ಸಮಕಾಲೀನ ಕಲಾಶಿಬಿರ' ಏರ್ಪಡಿಸುತ್ತಿದೆ.

ಈ ಶಿಬಿರದಲ್ಲಿ ಅಂತಾರಾಷ್ಟ್ರೀಯ ಪ್ರಖ್ಯಾತಿ ಪಡೆದಿರುವ ಮುಂಬಯಿನ ಕೃಷ್ಣಮಾಚಾರಿ ಬೋಸ್, ರಿಯಾಜ್ ಖೂಮ್, ಟಿ.ವಿ.ಸಂತೋಷ್, ಎಸ್.ಎನ್. ಸುಜೀತ್, ಮಧುದಾಸ್, ಬರೋಡದ ವೆಂಕಣ್ಣ, ಮಹೇಶ್ ಬಾಳಿಗಾ, ದೆಹಲಿಯ ಈರಣ್ಣ ಜಿ.ಆರ್., ಮಂಜುನಾಥ್ ಕಾಮತ್, ಅಬೀರ್ ಕರ್ನಾಕರ್, ಕಲ್ಕತಾದ ಪ್ರಶಾಂತ ಸಾಹು, ಕೇರಳದ ಕೆ.ಪಿ.ರೆಜಿ, ಸಿಬು ನಟೇಶನ್ ಹಾಗೂ ಕರ್ನಾಟಕದಿಂದ ಎನ್.ಎಸ್. ಹರ್ಷ, ಬಿ.ದೇವರಾಜ್ ಮತ್ತು ಸುನೋಜ್ ಜಿ. ಇವರುಗಳ ಭಾಗವಹಿಸುತ್ತಾರೆ. ಒಟ್ಟು ಹದಿನಾರು ರಾಷ್ಟ್ರೀಯ ಕಲಾವಿದರು ಈ ಶಿಬಿರದಲ್ಲಿ ಭಾಗವಹಿಸಿ ತಮ್ಮ ಕಲಾಕೃತಿಗಳನ್ನು ರಚಿಸುತ್ತಾರೆ. ಅವರುಗಳು ಒಟ್ಟು 6 ದಿನ ಕಲಾಶಿಬಿರದಲ್ಲಿರುತ್ತಾರೆ.

ಈ ಎಲ್ಲಾ ಕಲಾವಿದರು ರಾಷ್ಟ್ರ-ಅಂತಾರಾಷ್ಟ್ರ ಮಟ್ಟದಲ್ಲಿ ತಮ್ಮ ಕಲಾಕೃತಿಗಳ ಪ್ರದರ್ಶನ ಏರ್ಪಡಿಸಿರುತ್ತಾರೆ. ಅವರ ಕಲಾಕೃತಿಗಳು ಕೈಗೆಟಕದ ಬೆಲೆಯಯಾಗಿರುತ್ತದೆ. ಅವರ ಕಲಾಕೃತಿಗಳನ್ನು ಸಂಗ್ರಹಿಸುವುದು ಹೆಮ್ಮೆಯೆಂದು ಕಲಾಭಿಮಾನಿಗಳು ಮತ್ತು ಕಲಾವಿಮರ್ಶಕರು ಭಾವಿಸಿದ್ದಾರೆ.

ಕಲಾ ಶಿಬಿರಗಳಲ್ಲಿ ಭಾಗವಹಿಸಿ ಭಾರತದ ಹೆಸರಾಂತ ಕಲಾವಿದರ ಬಗೆಗೆ ಹೇಳುವುದಾದರೆ ಈ ಶಿಬಿರದಲ್ಲಿ ಭಾಗವಹಿಸುತ್ತಿರುವ ಕರ್ನಾಟಕದ ಎನ್.ಎಸ್.ಹರ್ಷ ಎಂಬ ಕಲಾವಿದರು 2008ರಲ್ಲಿ 'ಅಂತಾರಾಷ್ಟ್ರೀಯ ಮಂಡಿ (Artesmundi)' ಗೌರವ ಪಾತ್ರರಾಗಿದ್ದಾರೆ. ಇದು ಕರ್ನಾಟಕ ರಾಜ್ಯದ ಹೆಮ್ಮೆಯ ವಿಷಯವೂ ಹೌದು. ಅದೇ ಮುಂಬಯಿನ ಕಲಾವಿದರಾದ ಕೃಷ್ಣಮಾಚಾರಿ ಬೋಸ್, ರಿಯಾಜ್ ಕೂಮು ಅವರುಗಳು ಕೇರಳ ಕೊಚ್ಚಿಯ ಅಂತಾರಾಷ್ಟ್ರೀಯ ಕಲಾ ಪ್ರದರ್ಶನ ನಡೆಯಲು ಕಾರಣಕರ್ತರಾಗಿದ್ದಾರೆ. ಭಾರತದ ಕಲಾಕ್ಷೇತ್ರದಲ್ಲಿ ಇದೊಂದು ಕ್ರಾಂತಿಕಾರಕ ಬೆಳವಣಿಗೆಯಾಗಿತ್ತು. ಈ ಕಲಾಕ್ಷೇತ್ರದ ಈ ಕಾರ್ಯಕ್ರಮದ ಮೊತ್ತ ಮೊದಲ ಫೌಂಡರ್-ಡೈರೆಕ್ಟರ್‌ರಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ. ಇಂದು 'ಬಿನಾಲೆ ಭಾರತದ ಕಲಾವಿದರ ಇದೊಂದು ಅಪೂರ್ವ' ಇದಕ್ಕೆ ಮುಖ್ಯ ಕಾರಣಕರ್ತರು ಮುಂಬಯಿನ ಕೃಷ್ಣಮಾಚಾರಿ ಬೋಸ್. ಇವರ ಜೊತೆ ಆಗಮಿಸುವ ಟಿ.ವಿ.

ಸಂತೋಷ್, ಶಿಬು ನಟೇಶನ್ ಅವರುಗಳು ಸಹ ರಾಷ್ಟ್ರ-ಅಂತಾರಾಷ್ಟ್ರ ಮಟ್ಟದಲ್ಲಿ ತಮ್ಮ ಕಲಾಕೃತಿ ಪ್ರದರ್ಶನ ಮಾಡಿ ಖ್ಯಾತಿ ಹೊಂದಿರುತ್ತಾರೆ. ಅವರು ಕಲಾಕೃತಿಗಳು ಲಕ್ಷಾಂತರ ರೂಗಳಿಗೆ ಮಾರಾಟವಾಗಿರುತ್ತದೆ. ಕರ್ನಾಟಕ ಚಿತ್ರಕಲಾ ಪರಿಷತ್ತು ಈ ಪ್ರಖ್ಯಾತ ಕಲಾವಿದರುಗಳನ್ನು ಒಂದಡೆ ಸೇರಿಸಿ ಇಂತಹ ಅಪರೂಪದ ಕಲಾಶಿಬಿರವನ್ನು ಆಯೋಜಿಸಿದೆ. ಈ ಶಿಬಿರದಲ್ಲಿ ಕಲಾಕೃತಿಗಳು ರಾಷ್ಟ್ರದ ಅಮೂಲ್ಯ ಸಾಂಸ್ಕೃತಿಕ ಸಂಪತ್ತಾಗಿರುತ್ತದೆ.

ರಾಷ್ಟ್ರೀಯ ಕಲಾವಿದರ ಈ ಸಮಾವೇಶ ಮತ್ತು ಕಾರ್ಯಾಗಾರ ಕಲಾ ವಿದ್ಯಾರ್ಥಿಗಳಿಗೆ ಮತ್ತು ಕಲೆಯಲ್ಲಿ ಆಸ್ತಕರಿರುವವರಿಗೆ ಬೋಧನಾ ಮತ್ತು ಕಲಿಕಾಶಿಬಿರವಾಗಿರುತ್ತದೆ. ಈ ಕಲಾವಿದರು ತಮ್ಮ ಕಲಾಕೃತಿಗಳಿಂದಲೇ ಮಾರ್ಗದರ್ಶನ ನೀಡಲಿದ್ದಾರೆ. ರಾಜ್ಯ ಸ್ಥಳೀಯ ಕಲಾವಿದರಿಗೆ ಇದೊಂದು ಸುವರ್ಣಾವಕಾಶವಾಗಿರುತ್ತದೆ. ಈ ಪ್ರಖ್ಯಾತ ಕಲಾವಿದರು ರಚಿಸುವ ಕಲಾಕೃತಿಗಳಲ್ಲಿ ಅವರು ಬಳಸುವ ತಂತ್ರ, ಮಾಧ್ಯಮ, ಅದರ ಸೃಜನಾತ್ಮಕ ವಿವರಗಳನ್ನು ನೋಡುವ, ಕಲಿಯುವ, ಮನನಮಾಡುವ ಅಪೂರ್ವ ಅವಕಾಶ ಕಲಾವಿದರಿಗೆ, ಕಲಾಪ್ರೇಮಿಗಳಿಗೆ ಮತ್ತು ಕಲಾ ವಿದ್ಯಾರ್ಥಿಗಳಿಗೆ ದೊರಕಿರುತ್ತದೆ.

ಈ ಕಲಾವಿದರು ಚಿತ್ರಿಸುವ ಬಹು ಅಮೂಲ್ಯ ಕಲಾಕೃತಿಗಳ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಸಮಕಾಲೀನ ಕಲೆಯ ಸಂಗ್ರಹದ ಭಂಡಾರಕ್ಕೆ ವಿಶೇಷ ಕೊಡುಗೆಯಾಗಲಿದೆ. ಈ ಕಲಾಶಿಬಿರದಲ್ಲಿ ಸಾರ್ವಜನಿಕರು ಸಹ ಸೂಚಿತ ಸಮಯದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿಸಲಾಗಿದೆ